## 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

ಸಿ.ಸಿ. ನಂ.703/2017

ಫಿರ್ಯಾದಿ — ನಂಜನಗೂಡು ಪಟ್ಟಣ ಪೊಲೀಸ್ ಠಾಣೆ,

ವಿರುದ್ಧ

ಆರೋಪಿತರು

1. ಮಹೇಶ ಎಂ ಬಿನ್ ಲೇ.ಮರಿಸ್ವಾಮಿ, 30 ವರ್ಷ, ಮಸಣಾಪುರ, ಸಂತೆಮರಳ್ಳಿ ಹೋಬಳಿ, ಚಾಮರಾಜನಗರ ತಾಃ

2. ಮಲ್ಲಿಕಾರ್ಜುನಸ್ವಾಮಿ ಬಿನ್ ಬಸವಣ್ಣ, 34 ವರ್ಷ, ಅರಕಲವಾಡಿ, ಹರಧನಹಳ್ಳಿ ಹೋಬಳಿ, ಚಾಮರಾಜನಗರ ತಾ.

3. ನಾಗರಾಜು ಬಿನ್ ಚಿಕ್ಕಮಾದಯ್ಯ, 30 ವರ್ಷ, ಬೇಡರಪುರ, ಚಾಮರಾಜನಗರ ಕಸಬಾ

## ಆರೋಪಣೆ

ಶ್ರೀಮತಿ ವಿನುತ ಡಿ. ಎಸ್., ಬಿ.ಎ.ಸ್ಸಿ (ಅಗ್ರಿಕಲ್ಚರ್) , ಎಲ್.ಎಲ್.ಬಿ. 2ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರಾದ ನಾನು ನಿಮ್ಮ ಮೇಲೆ ದೋಷಾರೋಪಿಸುವುದೇನೆಂದರೆ:

ದಿನಾಂಕ 03.04.2017 ರಂದು ನಂಜನಗೂಡಿನ ಉಪ ಚುನಾವಣಾ ಸಂಬಂಧ ನೀತಿ ಸಂಹಿತೆ ಜಾರಿಯಲ್ಲಿದ್ದು ಆ ದಿನ ಚಾಸಾ-01 ಮತ್ತು ಅವರ ಸಿಬ್ಬಂದಿ ಫ್ಲೈಯಿಂಗ್ ಸ್ಕ್ವಾಡ್ 5 ವಾಹನಗಳ ತಪಾಸಣೆ ನಡೆಸುತ್ತಿದ್ದಾಗ ರಾತ್ರಿ 08.45 ಗಂಟೆ ಸಮಯದಲ್ಲಿ ನಂಜನಗೂಡು ಪಟ್ಟಣದ ಗ್ರಾಮಾಂತರ ಪೊಲೀಸ್ ಠಾಣಾ ಮುಂಭಾಗ ಮೈಸೂರು - ಊಟಿ ರಾಷ್ಟ್ರೀಯ ಹೆದ್ದಾರಿಯಲ್ಲಿ 1 ನೇ ಮತ್ತು 2 ನೇ ಆರೋಪಿತರಾದ ನೀವು 3 ನೇ ಆರೋಪಿಯ ಬಾಬ್ತು ಕೆಎ-25-ಎಎ-4565 ಬುಲೆರೋ ಪಿಕ್ ಅಪ್ ವಾಹನದಲ್ಲಿ ಅನಧಿಕೃತವಾಗಿ ಯಾವುದೇ ದಾಖಲಾತಿ ಹೊಂದದೆ ಅನುಮಾನಾಸ್ಪದವಾಗಿ ಒಂದು ಕಪ್ಪು ಬಣ್ಣದ ತಗಡಿನ ಡಬ್ಬದಲ್ಲಿ 500/- ರೂ ಮುಖ ಬೆಲೆಯ ಒಟ್ಟು 20 ಲಕ್ಷ ರೂಪಾಯಿಗಳನ್ನು ಸಾಗಾಟ ಮಾಡುತ್ತಿದ್ದು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘನೆಮಾಡಿ ಆ ಮೂಲಕ ಆರೋಪಿತರಾದ ನೀವು ಐ.ಪಿ.ಸಿ

A1 [signature] A3 [signature]

A2 [signature]

ಕಾಯ್ದೆ ಕಲಂ 171 ಬಿ ಮತ್ತು ಈ ಸಹವಾಚಕ 102 ಸಿಆರ್.ಪಿ.ಸಿ ರ ಪ್ರಕಾರ ಶಿಕ್ಷಾರ್ಹ ಅಪರಾಧವೆಸಗಿರುವಿರೆಂದು ನಿಮ್ಮ ಮೇಲೆ ದೋಷಾರೋಪಿಸಲಾಗಿದೆ.

ಸದರೀ ಆರೋಪಣೆಯು ನನ್ನ ಸಂಜ್ಞಾನದಲ್ಲಿದ್ದು ವಿಚಾರಣೆಯು ಇದೇ ನ್ಯಾ ಯಾಲಯದಲ್ಲಿ ನಡೆಯುವಂತೆ ನಾನು ನಿರ್ದೇಶಿಸಿರುತ್ತೇನೆ.

**ಪ್ರಶ್ನೆ:1: ಈಗ ನಿಮಗೆ ಓದಿ ಹೇಳಿದ ಆಪಾದನೆ ತಿಳಿಯಿತೇ?**

**1 ನೇ ಆರೋಪಿ ಉತ್ತರ:-** ತಿಳಿಯಿತು.

**2 ನೇ ಆರೋಪಿ ಉತ್ತರ:-** ತಿಳಿಯಿತು.

**3 ನೇ ಆರೋಪಿ ಉತ್ತರ:-** ತಿಳಿಯಿತು.

**ಪ್ರಶ್ನೆ:2: ಮೇಲ್ಕಂಡ ಆರೋಪವನ್ನು ನೀವು ಒಪ್ಪಿಕೊಳ್ಳುವಿರೋ? ಅಥವಾ ವಿಚಾರಣೆ ಆಗಬೇಕೆಂದು ಬಯಸುವಿರೋ?**

**1 ನೇ ಆರೋಪಿ ಉತ್ತರ:-** ವಿಚಾರಣೆಯಾಗಲಿ. ತಪ್ಪು ಮಾಡಿಲ್ಲ.

**2 ನೇ ಆರೋಪಿ ಉತ್ತರ:-** ತಪ್ಪು ಮಾಡಿಲ್ಲ ವಿಚಾರಣೆಯಾಗಲಿ.

**3 ನೇ ಆರೋಪಿ ಉತ್ತರ:-** ತಪ್ಪು ಮಾಡಿಲ್ಲ ವಿಚಾರಣೆಯಾಗಲಿ.

ಮೇಲ್ಕಂಡ ಅಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಉತ್ತರಿಸಿದಂತೆಯೇ ತೆರೆದ ನ್ಯಾಯಾಲಯದಲ್ಲಿ ಬರೆದುಕೊಂಡಿದ್ದು ಆರೋಪಿ ನೀಡಿರುವ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿ ಒಳಗೊಂಡಿದೆ ಎಂದು ನಾನು ಈ ಮೂಲಕ ದಿ: 21.01.2020 ರಂದು ದೃಢೀಕರಿಸುತ್ತೇನೆ.

[signature]

2 ನೇ ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು

A1 [signature]

A3 [signature]

A2 [signature]